# ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ
## ನಂದಿನಗರ,ಬೀದರ–585 226

ದೂರವಾಣಿ:ಕಛೇರಿ:08482–245241
Website:www.kvafsu.edu.in
Email : regkvafsu@gmail.com

**ಕುಲಸಚಿವರ ಕಾರ್ಯಾಲಯ**


No. RGR/ACAD/ADMN/3/2025-ACDM-KVAFSU ದಿನಾಂಕ: 01-07-2025

**ಆನ್‌ಲೈನ್ ಅರ್ಜಿ ಸಲ್ಲಿಸುವ ಪ್ರಾರಂಭದ ದಿನಾಂಕ: 01-07-2025**
**ಆನ್‌ಲೈನ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 31-07-2025**

**Link for application : https://bit.ly/4kZvwLV**

## ಅಧಿಸೂಚನೆ

Scan for online application

**ವಿಷಯ:-** 2025-2026ನೇ ಶೈಕ್ಷಣಿಕ ಸಾಲಿನ ಡಿಪ್ಲೋಮಾ (ಪಶು ಸಂಗೋಪನೆ) ಪ್ರವೇಶ ಕುರಿತು.
**ಉಲ್ಲೇಖ:-** No.KVAFSU/AHP-Admn-2025-26/2025-25,ದಿನಾಂಕ:25-06-2025

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ವ್ಯಾಪ್ತಿಯಲ್ಲಿ 2025-26ನೇ ಶೈಕ್ಷಣಿಕ ಸಾಲಿಗೆ ಡಿಪ್ಲೋಮಾ (ಪಶು ಸಂಗೋಪನೆ)ಯಲ್ಲಿ 2 ವರ್ಷ ಅವಧಿಯ ಡಿಪ್ಲೋಮಾ ಕೋರ್ಸಿನ ಪ್ರವೇಶಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ (Online) ಮುಖಾಂತರ ಅರ್ಜಿಗಳನ್ನು ಅಹ್ವಾನಿಸುವ ಕುರಿತು.

1. **ಕೋರ್ಸಗಳ ವಿವರ**: ಡಿಪ್ಲೋಮಾ (ಪಶು ಸಂಗೋಪನೆ)

2. **ವಿದ್ಯಾರ್ಹತೆ:** ಕರ್ನಾಟಕ ಪೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್.ಎಸ್.ಎಲ್.ಸಿ/ ತತ್ಸಮಾನ ಪರೀಕ್ಷೆಯೊಂದಿಗೆ ಕನ್ನಡ ಒಂದು ವಿಷಯವನ್ನು ಕಡ್ಡಾಯವಾಗಿ ಓದಿ ಕನಿಷ್ಠ ಶೇ. 45 ರಷ್ಟು ಅಂಕಗಳನ್ನು ಪಡೆದು ತೇರ್ಗಡೆಯಾಗಿರಬೇಕು (ಪ.ಜಾತಿ/ಪ.ಪಂಗಡ/ಪ್ರವರ್ಗ-1ರ ಅಭ್ಯರ್ಥಿಗಳು ಶೇ.40 ರಷ್ಟು ಅಂಕಗಳನ್ನು ಪಡೆದು ತೇರ್ಗಡೆ-ಯಾಗಿರಬೇಕು) ಮತ್ತು ಕಡ್ಡಾಯವಾಗಿ 1 ರಿಂದ 10ನೇ ತರಗತಿಯವರೆಗೆ ಗ್ರಾಮೀಣ ಪ್ರದೇಶದಲ್ಲಿ ವಿದ್ಯಾಭ್ಯಾಸ ಮಾಡಿರಬೇಕು.

3. **ವಯೋಮಿತಿ:** ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ 31.07.2025ರಂದು ಅಭ್ಯರ್ಥಿಯ ವಯಸ್ಸು 20 ವರ್ಷ ಮೀರಿರಬಾರದು.

4. **ಬೋಧನಾ ಮಾಧ್ಯಮ:** ಪಶುಸಂಗೋಪನಾ ಡಿಪ್ಲೋಮಾದ ತರಗತಿಗಳನ್ನು ಕನ್ನಡ ಮಾಧ್ಯಮದಲ್ಲಿ ನಡೆಸಲಾಗುವುದು.

5. **ಶಿಷ್ಯ ವೇತನ:** ಪ್ರವೇಶ ಪಡೆದ ಎಲ್ಲಾ ಅಭ್ಯರ್ಥಿಗಳಿಗೆ ರೂ.1000/-ಗಳ ಮಾಸಿಕ ಶಿಷ್ಯ ವೇತನವನ್ನು ವ್ಯಾಸಂಗದ ಅವಧಿಯಲ್ಲಿ ನಿಯಮಾನುಸಾರ ನೀಡಲಾಗುವುದು.

**ಅರ್ಜಿಸಲ್ಲಿಸುವುದು ಮತ್ತು ಅರ್ಜಿಯ ಶುಲ್ಕ:**

ಅರ್ಜಿಯನ್ನು ಆನ್‌ಲೈನ್ ಮುಖಾಂತರ ವಿಶ್ವವಿದ್ಯಾಲಯದ ಜಾಲತಾಣ **(https://kvafsu.edu.in/admission.html)** ದಲ್ಲಿ ಭರ್ತಿಮಾಡುವುದು. ಆನ್‌ಲೈನ್ ಮುಖಾಂತರ ಅರ್ಜಿ ಭರ್ತಿಮಾಡುವ **ದಿನಾಂಕ 01.07.2025** ರಿಂದ ಪ್ರಾರಂಭವಾಗುವುದು ಹಾಗೂ ಕೊನೆಯ **ದಿನಾಂಕ: 31.07.2025.** ಇತರೇ ಮೂಲಗಳಿಂದ ಬಂದ ಅರ್ಜಿಗಳನ್ನು ಯಾವುದೇ ಕಾರಣಕ್ಕೆ ಸ್ವೀಕರಿಸಲಾಗುವುದಿಲ್ಲ.

**ಸಾಮಾನ್ಯ /2ಎ/2ಬಿ/3ಎ/3ಬಿ ವರ್ಗದವರಿಗೆ ರೂ.700/- ಮತ್ತು ಪ.ಜಾ/ಪ.ಪ./ಪ್ರವರ್ಗ-1 ರೂ. 350/-.** (ಅರ್ಜಿಯ ಶುಲ್ಕವು ಆನ್‌ಲೈನ್ ಅರ್ಜಿ ಸಲ್ಲಿಸಿದ ನಂತರ ಆನ್‌ಲೈನ್ ಮುಖಾಂತರವೇ ಪಾವತಿಸುವುದು. ಇತರೇ ಯಾವುದೇ ಮೂಲಗಳಿಂದ ಅರ್ಜಿಯ ಶುಲ್ಕವನ್ನು ಸ್ವೀಕರಿಸಲಾಗುವುದಿಲ್ಲ.)

**ಆನ್‌ಲೈನ್ ಅರ್ಜಿ ಸಲ್ಲಿಸುವಾಗ ಅಪ್‌ಲೋಡ್ ಮಾಡಬೇಕಾದ ಅಗತ್ಯ ಪ್ರಮಾಣ ಪತ್ರಗಳು:**

1. ಎಸ್.ಎಸ್.ಎಲ್.ಸಿ, ಅಂಕ ಪಟ್ಟಿ (ಕಂಪ್ಯೂಟರ್ ಪ್ರಿಂಟ್ ಇದ್ದಲ್ಲಿ ಮುಖ್ಯ ಗುರುಗಳ ಸಹಿ ಹಾಗೂ ಮೊಹರು ಹೊಂದಿರಬೇಕು).
2. 1 ರಿಂದ 10ನೇ ತರಗತಿಯವರೆಗೆ ಗ್ರಾಮೀಣ ಪ್ರದೇಶದಲ್ಲಿ ವ್ಯಾಸಂಗ ಮಾಡಿದ **"ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ"** , (ನಿಗದಿತ ದಿನಾಂಕದ ಒಳಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಸಹಿ ಹಾಗೂ ಮೊಹರ ಹೊಂದಿರಬೇಕು).
3. ಮೀಸಲಾತಿ ಬಯಸುವ ಅಭ್ಯರ್ಥಿಯು ಸಂಬಂಧಪಟ್ಟ ಪ್ರಾಧಿಕಾರದಿಂದ ಜಾತಿ ಮತ್ತು ಆದಾಯ ಪ್ರಮಾಣ ಪತ್ರ.

4. ಅನುಚ್ಛೇದ 371(ಜೆ) ರಂತೆ ಕಲ್ಯಾಣ-ಕರ್ನಾಟಕ ಪ್ರದೇಶಕ್ಕೆ ಸೇರಿದ ಅಭ್ಯರ್ಥಿಗಳಾಗಿದ್ದರೆ ಸೂಕ್ತವಾದ ಪ್ರಮಾಣ ಪತ್ರ. (ಪ್ರಮಾಣ ಪತ್ರವನ್ನು ಸಹಾಯಕ ಆಯುಕ್ತರವರಿಂದ ಪಡೆಯತಕ್ಕದ್ದು).
5. ರೈತರ ಹಾಗೂ ಕೃಷಿ ಕಾರ್ಮಿಕರ ಮಕ್ಕಳಿಗೆ ಶೇ.50% ರಷ್ಟು ಸೀಟುಗಳನ್ನು ಡಿಪ್ಲೋಮಾ (ಪಶುಸಂಗೋಪನೆ) ಕೋರ್ಸ್‌ನ ಪ್ರವೇಶಾತಿಗೆ ಮೀಸಲಿಡಲಾಗಿದೆ. ಅಭ್ಯರ್ಥಿಗಳು ಈ ಕೋಟಾದಡಿ ಪ್ರವೇಶ ಬಯಸಿದ್ದಲ್ಲಿ ಈ ಕೆಳಕಂಡ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದು ಲಗತ್ತಿಸಬೇಕು (ನಮೂನೆಗಳನ್ನು ಲಗತ್ತಿಸಲಾಗಿದೆ).
   I. ವ್ಯವಸಾಯಗಾರರ ಪ್ರಮಾಣ ಪತ್ರ / ಕೃಷಿ ಮತ್ತು ಕೃಷಿ ಸಂಬಂಧಿತ ಕೂಲಿ ಕಾರ್ಮಿಕರ ಪ್ರಮಾಣ ಪತ್ರ - RD ಸಂಖ್ಯೆಯೊಂದಿಗೆ ಕಂದಾಯ ಇಲಾಖೆಯಲ್ಲಿ ಕೊಡುವ ಪ್ರಮಾಣ ಪತ್ರ.
   II. ಅವಿಭಾಜ್ಯ ಕುಟುಂಬವಾದಲ್ಲಿ ಪೂರಕವಾಗಿ ವಂಶವೃಕ್ಷ ಪ್ರಮಾಣ ಪತ್ರ ಕೃಷಿಕರ ಕೋಟಾದಡಿಯಲ್ಲಿ ಅರ್ಜಿಯನ್ನು ಪರಿಗಣಿಸಲು ಕಡ್ಡಾಯವಾಗಿ ಲಗತ್ತಿಸುವುದು RD ಸಂಖ್ಯೆ ಮತ್ತು QR ಕೋಡ್‌ನೊಂದಿಗೆ ತಹಶೀಲ್ದಾರ್ ರವರು ಕೊಡುವ ಪ್ರಮಾಣ ಪತ್ರ

6. ಎನ್.ಸಿ.ಸಿ./ಕ್ರೀಡಾ/ಸ್ಕೌಟ್ಸ್ ಮತ್ತು ಗೈಡ್ಸ್ / ವಿಶೇಷ ಚೇತನರು/ ಯೋಧರು/ಮಾಜಿ ಯೋಧರು /ಆಂಗ್ಲೋ ಇಂಡಿಯನ್ ಮತ್ತು ಗಡಿನಾಡು ಕನ್ನಡಿಗರು/ಹೊರನಾಡು ಕನ್ನಡಿಗರು / ಸಿ.ಎ.ಪಿ.ಎಫ್ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳು ಈ ಕೋಟಾದಡಿ ಪ್ರವೇಶ ಬಯಸಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿ/ಪ್ರಾಧಿಕಾರಗಳಿಂದ ಪಡೆದ ಪ್ರಮಾಣ ಪತ್ರ.

7. ಆವರ್ತಿತ (ಮರುಕಳಿಸುವ) ರೋಗದಿಂದ ಬಳಲುತ್ತಿರುವ, ಪ್ರವೇಶಕ್ಕೆ ಆಯ್ಕೆಯಾಗಿರುವ ಅಭ್ಯರ್ಥಿಯು ಮಹಾವಿದ್ಯಾಲಯದಲ್ಲಿ ನೋಂದಣಿ ಸಮಯದಲ್ಲಿ ಪರಿಣಿತ ವೈದ್ಯರಿಂದ ಪ್ರಮಾಣಪತ್ರವನ್ನು ಸಲ್ಲಿಸಬೇಕಾಗುತ್ತದೆ.

**2025-26ನೇ ಸಾಲಿನ ಪ್ರವೇಶಾತಿಯ ತಾತ್ಕಾಲಿಕ ವೇಳಾಪಟ್ಟಿ**

<table>
<tr><th>ಪ್ರವೇಶ ಪ್ರಕ್ರಿಯೆಯ ವಿವರ</th><th colspan="2">ದಿನಾಂಕ</th></tr>
<tr><td>ಆನ್‌ಲೈನ್ ಅರ್ಜಿ ಸಲ್ಲಿಸುವ ಪ್ರಾರಂಭದ ದಿನಾಂಕ</td><td colspan="2">01.07.2025</td></tr>
<tr><td>ಆನ್‌ಲೈನ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ</td><td colspan="2">31.07.2025 (23:59:59 ರವರೆಗೆ)</td></tr>
<tr><td rowspan="3">ಮೂಲ ದಾಖಲಾತಿ ಪರಿಶೀಲನೆ<br>ಮೂಲ ದಾಖಲಾತಿ ಪರಿಶೀಲನ ಕೇಂದ್ರಗಳು:<br>1. ಪಶುವೈದ್ಯಕೀಯ ಮಹಾವಿದ್ಯಾಲಯ, ನಂದಿನಗರ, ಬೀದರ<br>2. ಪಶುವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ, ಬೆಂಗಳೂರು<br>3. ಪಶುವೈದ್ಯಕೀಯ ಮಹಾವಿದ್ಯಾಲಯ, ಹೊಂಬಾಳ ರಸ್ತೆ, ಗದಗ<br>4. ಪಶುವೈದ್ಯಕೀಯ ಮಹಾವಿದ್ಯಾಲಯ,ವಿನೋಬನಗರ, ಶಿವಮೊಗ್ಗ<br>5. ಪಶುವೈದ್ಯಕೀಯ ಮಹಾವಿದ್ಯಾಲಯ, ಗೋಕುಲ ಆವರಣ, ವಿದ್ಯಾನಗರ, ಹಾಸನ<br>ಸೂಚನೆಗಳು:<br>1. ದಾಖಲಾತಿ ಪರಿಶೀಲನೆಯ ಸಮಯ ಬೆಳಗ್ಗೆ 10.00 ಗಂಟೆಯಿಂದ ಸಾಯಂಕಾಲ 4.00 ಗಂಟೆಯ ವರೆಗೆ ಮಾತ್ರ.<br>2. ಅಭ್ಯರ್ಥಿಗಳು/ಪೋಷಕರು ಖುದ್ದಾಗಿ ಮೂಲದಾಖಲಾತಿಗಳು, ಅರ್ಜಿಯ ಪ್ರತಿ ಹಾಗೂ ಅವುಗಳ ನಕಲು ಎರಡು ಪ್ರತಿಗಳೊಂದಿಗೆ ಕಡ್ಡಾಯವಾಗಿ ತೆಗೆದುಕೊಂಡು ದಾಖಲಾತಿಗಳ ಪರಿಶೀಲನೆಯನ್ನು ಪೂರ್ಣಗೊಳಿಸುವುದು.</td><td>ಎಸ್‌ಎಸ್‌ಎಲ್‌ಸಿ ಫಲಿತಾಂಶ 75% ಮೇಲ್ಪಟ್ಟ ಅಭ್ಯರ್ಥಿಗಳಿಗೆ</td><td>11.08.2025</td></tr>
<tr><td>ಎಸ್‌ಎಸ್‌ಎಲ್‌ಸಿ ಫಲಿತಾಂಶ 60% ರಿಂದ 75% ವರೆಗಿನ ಅಭ್ಯರ್ಥಿಗಳಿಗೆ</td><td>12.08.2025</td></tr>
<tr><td>ಎಸ್‌ಎಸ್‌ಎಲ್‌ಸಿ ಫಲಿತಾಂಶ 60% ಕ್ಕಿಂತ ಕೆಳಗಿನ ಅಭ್ಯರ್ಥಿಗಳಿಗೆ</td><td>13.08.2025</td></tr>
<tr><td>ವಿಶ್ವವಿದ್ಯಾಲಯದ (https://kvafsu.edu.in/admission.html) ಜಾಲತಾಣದಲ್ಲಿ ಅರ್ಹ / ಅನರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ</td><td colspan="2">22.08.2025<br>(ಮಧ್ಯಾಹ್ನ 1 ಗಂಟೆ ನಂತರ)</td></tr>
<tr><td>ಪ್ರಥಮ ಆಯ್ಕೆ ಪಟ್ಟಿ ವಿಶ್ವವಿದ್ಯಾಲಯದ ಜಾಲತಾಣ (https://kvafsu.edu.in/admission.html) ದಲ್ಲಿ ಪ್ರಕಟಣೆ</td><td colspan="2">26.08.2025<br>(ಮಧ್ಯಾಹ್ನ 1 ಗಂಟೆ ನಂತರ)</td></tr>
<tr><td>ಪ್ರಥಮ ಆಯ್ಕೆಯ ಪಟ್ಟಿಯ ಪ್ರಕಾರ ಪಶುಸಂಗೋಪನಾ ಪಾಲಿಟೆಕ್ನಿಕ್ ಕೋರ್ಸ್‌ಗೆ ಆಯ್ಕೆಯಾದ ಅಭ್ಯರ್ಥಿಗಳು ಸಂಬಂಧಪಟ್ಟ ಪಶುಸಂಗೋಪನಾ ಪಾಲಿಟೆಕ್ನಿಕ್‌ಗೆ ಹೋಗಿ ಶುಲ್ಕ ಪಾವತಿಸುವುದರ ಮೂಲಕ ಪ್ರವೇಶ ಖಾತ್ರಿ ಪಡಿಸುವುದು ಹಾಗೂ ಎಲ್ಲ ಮೂಲ ದಾಖಲಾತಿಗಳು ಸಲ್ಲಿಸುವುದು.</td><td colspan="2">28.08.2025 ರಿಂದ 30.08.2025</td></tr>
<tr><td>ಎರಡನೇ ಆಯ್ಕೆ ಪಟ್ಟಿ ವಿಶ್ವವಿದ್ಯಾಲಯದ ಜಾಲತಾಣ (https://kvafsu.edu.in/admission.html) ದಲ್ಲಿ ಪ್ರಕಟಣೆ</td><td colspan="2">06.09.2025</td></tr>
<tr><td>ಎರಡನೇ ಆಯ್ಕೆಯ ಪಟ್ಟಿಯ ಪ್ರಕಾರ ಪಶುಸಂಗೋಪನಾ ಪಾಲಿಟೆಕ್ನಿಕ್ ಕೋರ್ಸ್‌ಗೆ ಆಯ್ಕೆಯಾದ ಅಭ್ಯರ್ಥಿಗಳು ಸಂಬಂಧಪಟ್ಟ ಪಶುಸಂಗೋಪನಾ ಪಾಲಿಟೆಕ್ನಿಕ್‌ಗೆ ಹೋಗಿ ಶುಲ್ಕ ಪಾವತಿಸುವುದರ ಮೂಲಕ ಪ್ರವೇಶ ಖಾತ್ರಿ ಪಡಿಸುವುದು ಹಾಗೂ ಎಲ್ಲ ಮೂಲ ದಾಖಲಾತಿಗಳು / ಪ್ರಮಾಣ ಪತ್ರಗಳು ಸಲ್ಲಿಸುವುದು</td><td colspan="2">08.09.2025 ರಿಂದ 10.09.2025</td></tr>
<tr><td>ಶೈಕ್ಷಣಿಕ ವರ್ಷದ ಆರಂಭ</td><td colspan="2">15.09.2025</td></tr>
</table>

**ಪ್ರವೇಶ ಮತ್ತು ಆಯ್ಕೆ ವಿಧಾನ:** ಡಿಪ್ಲೋಮಾ (ಪಶುಸಂಗೋಪನೆ) ಕೋರ್ಸ್ಗೆ ಪ್ರವೇಶವನ್ನು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಅಂಕಗಳ ಮೇರೆಗೆ ಸರ್ಕಾರದ ಆದೇಶಗಳ ಅನ್ವಯ ಮೆರಿಟ್ ಮತ್ತು ರೋಸ್ಟರ್ ಆಧರಿಸಿ ಅರ್ಹ ಅಭ್ಯರ್ಥಿಗಳಿಗೆ ಪ್ರವೇಶ ನೀಡಲಾಗುವುದು.

**ಹೆಚ್ಚಿನ ಮಾಹಿತಿಗಾ ವಿವರಣಾ ಪುಸ್ತಕ - 2025-26** (**PROSPECTUS)** ವನ್ನು ವಿಶ್ವವಿದ್ಯಾಲಯದ ಜಾಲತಾಣ (https://kvafsu.edu.in/admission.html) ದಲ್ಲಿ ನೋಡಬಹುದಾಗಿದೆ.

**ವಿಶೇಷ ಸೂಚನೆ:** ಡಿಪ್ಲೋಮಾ (ಪಶುಸಂಗೋಪನೆ) ಕೋರ್ಸ್ ಯುವ ಜನತೆಗೆ ಸ್ವಯಂ ಉದ್ಯೋಗವನ್ನು ಕೈಗೊಳ್ಳುವ ಉದ್ದೇಶವನ್ನು ಹೊಂದಿದೆ. ಸತತವಾಗಿ ಪಶುಸಂಗೋಪನೆ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರೊಂದಿಗೆ ಪಶು ಸಂಬಂಧಿತ ಉತ್ಪಾದನೆಯನ್ನು ಹೆಚ್ಚಿಸುವ ಕುರಿತು ಜ್ಞಾನವನ್ನು ಪಡೆಯುವಲ್ಲಿ ನೆರವಾಗುತ್ತದೆ. ಹಾಗೂ ಐವಿಸಿ ಕಾಯಿದೆ, 1984ರ ಸೆಕ್ಷನ್ 30 (ಬಿ) ಅಡಿಯಲ್ಲಿ ಕರ್ನಾಟಕ ಸರ್ಕಾರವು ವ್ಯಾಖ್ಯಾನಿಸಿದಂತೆ ನೋಂದಾಯಿತ ಪಶುವೈದ್ಯಕೀಯ ವೈದ್ಯರ ಮೇಲ್ವಿಚಾರಣೆ ಮತ್ತು ನಿರ್ದೇಶನದ ಅಡಿಯಲ್ಲಿ "ಅಪ್ರಧಾನ ಪಶುವೈದ್ಯಕೀಯ ಸೇವೆಗಳಿಗೆ" ಸೀಮಿತವಾದ ಸೇವೆಗಳನ್ನು ನಿರ್ವಹಿಸಲು ಮಾತ್ರ ಅರ್ಹರಾಗಿರುತ್ತಾರೆ. ವಿಶ್ವವಿದ್ಯಾಲಯ ಮತ್ತು ಕರ್ನಾಟಕ ಸರ್ಕಾರದ ವತಿಯಿಂದ ಡಿಪ್ಲೋಮಾ (ಪಶುಸಂಗೋಪನೆ) ಕೋರ್ಸ್‌ನ್ನು ಮುಗಿಸಿದ ಅಭ್ಯರ್ಥಿಗಳಿಗೆ ಯಾವುದೇ ಖಚಿತ ಸರ್ಕಾರಿ ಉದ್ಯೋಗದ ಕುರಿತು ಭರವಸೆ ಇರುವುದಿಲ್ಲ.

"ಮಾನ್ಯ ಕುಲಪತಿಗಳಿಂದ ಅನುಮೋದನೆಗೊಳ್ಳಪ್ಪಟಿದೆ"

**ಸಹಿ/-**
**ಕುಲಸಚಿವರು**

**ಪ್ರತಿಗಳು:**

1. ವಿಸ್ತರಣಾ ನಿರ್ದೇಶಕರು, ಕ.ಪ.ಪ.ಮೀ.ವಿ.ವಿ, ಬೀದರ ಇವರ ಮಾಹಿತಿಗಾಗಿ
2. ವಿಶ್ವವಿದ್ಯಾಲಯದ ಎಲ್ಲಾ ಅಧಿಕಾರಿಗಳ ಮಾಹಿತಿಗಾಗಿ
3. ಪ್ರಾಂಶುಪಾಲರು, ಪಶುಸಂಗೋಪನಾ ಪಾಲಿಟೆಕ್ನಿಕ್, ಕೊನೆಹಳ್ಳಿ, ಶಿಗ್ಗಾಂವಿ, ಕೊರವಂಗಲ ಕ್ರಾಸ್, ಹಾಸನ, ಬರ್ಗಿ, ಗುಂಡ್ಲುಪೇಟೆ ಚಾಮರಾಜನಗರ ಮತ್ತು ದೋರನಹಳ್ಳಿ, ಶಾಹಪೂರ ಇವರ ಮಾಹಿತಿಗಾಗಿ
4. ವಿಶ್ವವಿದ್ಯಾಲಯದ ಜಾಲತಾಣ (https://kvafsu.edu.in/admission.html)
5. ಹಿರಿಯ ಆಪ್ತ ಕಾರ್ಯದರ್ಶಿಗಳು ಗ್ರೇಡ-1, ಮಾನ್ಯ ಕುಲಪತಿಗಳ ಕಾರ್ಯಲಯ, ಕಪಪಮೀವಿವಿ ಬೀದರ್ ಇವರ ಮಾಹಿತಿಗಾಗಿ.